# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **61**

ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : **27-01-2026**

ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು

| ಕ್ರಮ. ಸಂ:. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಯಾವ ರೀತಿಯ ಕೈಗಾರಿಕೆಗಳನ್ನು ಸಣ್ಣ ಮತ್ತು ಗುಡಿ ಕೈಗಾರಿಕೆಗಳೆಂದು ಗುರುತಿಸಲಾಗಿದೆ; ಅವುಗಳ ಒಟ್ಟು ಸಂಖ್ಯೆ ಎಷ್ಟು; | ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ: 01.04.2025ರಂತೆ ಎಂ.ಎಸ್.ಎಂ.ಇ ವ್ಯಾಖ್ಯಾನದ ಪ್ರಕಾರ ಯಂತ್ರೋಪಕರಣಗಳ ಮೇಲೆ ಹೂಡಿಕೆ ಮತ್ತು ವಾರ್ಷಿಕ ವಹಿವಾಟುಗಳನ್ನು ಆಧರಿಸಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳನ್ನಾಗಿ ವರ್ಗೀಕರಿಸಲಾಗಿದೆ.<br>ವಿವರಗಳು ಕೆಳಕಂಡತಿವೆ.<br><br>**ವರ್ಗ** — **ವಿವರಗಳು**<br>ಸೂಕ್ಷ್ಮ — ರೂ.2.50 ಕೋಟಿವರೆಗೆ ಯಂತ್ರೋಪಕರಣಗಳ ಮೇಲೆ ಹೂಡಿಕೆ ಮತ್ತು ರೂ.10.00 ಕೋಟಿ ವಾರ್ಷಿಕ ವಹಿವಾಟು.<br>ಸಣ್ಣ — ರೂ.25.00 ಕೋಟಿವರೆಗೆ ಯಂತ್ರೋಪಕರಣಗಳ ಮೇಲೆ ಹೂಡಿಕೆ ಮತ್ತು ರೂ.100.00 ಕೋಟಿ ವಾರ್ಷಿಕ ವಹಿವಾಟು.<br><br>ರಾಜ್ಯದಲ್ಲಿ ಜುಲೈ-2020 ರಿಂದ ಎಂ.ಎಸ್.ಎಂ.ಇ (MSME) ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ನೊಂದಣಿ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ.<br>ದಿನಾಂಕ: 31.12.2025ರ ಅಂತ್ಯಕ್ಕೆ ಉದ್ಯಮ್ ತಂತ್ರಾಂಶದಲ್ಲಿದ್ದಂತೆ ರಾಜ್ಯದಲ್ಲಿ ಒಟ್ಟು 24,52,618 ಸೂಕ್ಷ್ಮ ಹಾಗೂ 31,479 ಸಣ್ಣ ಉದ್ಯಮಗಳು ನೋಂದಣಿಯಾಗಿರುತ್ತವೆ. |

